**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 1251/2021**

ಪಿ.ಡಬ್ಲ್ಯೂ: 3

ಸಿ.ಡಬ್ಲ್ಯೂ: 3

| | |
|---|---|
| ಸಾಕ್ಷಿದಾರರ ಹೆಸರು | : ನಾಗ್ಯನಾಯ್ಕ |
| ತಂದೆಯ ಹೆಸರು | : ಕೀಮ್ಯನಾಯ್ಕ |
| ವಯಸ್ಸು | : 40 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸಸ್ಥಳ | : ಕರಕುಚ್ಚಿ |

**ದಿನಾಂಕ: 05-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ದಿನಾಂಕ: 03-07-2020 ರಂದು ಬೆಳಿಗ್ಗೆ 9-30 ಗಂಟೆ ಸಮಯದಲ್ಲಿ ಕರಕುಚ್ಚಿ ತಾಂಡ್ಯದಲ್ಲಿರುವ ಚಾಸಾ-1 ರವರ ಮಂಜುನಾಥ ಆಗ್ರೋ ಸೆಂಟರ್ ಗೊಬ್ಬರದ ಅಂಗಡಿಯಲ್ಲಿ 80 ಸಾವಿರ ಹಣ ಕಳ್ಳತನವಾದ ವಿಚಾರವಾಗಿ ಪೊಲೀಸರು ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹಿ ಹಾಕಿರುತ್ತೇನೆ. ಸದರಿ ದಾಖಲಾತಿಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿರುತ್ತದೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀಮತಿ ಬಿ ಟಿ ಕೆ ವಕೀಲರಿಂದ.**

ಚಾಸಾ-1 ರವರು ನಮ್ಮ ಗ್ರಾಮದವರು ಎಂದರೆ ಸರಿ. ಚಾಸಾ-1 ರವರು ನಮ್ಮ ಊರಿನವರಾದ ಕಾರಣ ಪರಿಚಯವಿರುತ್ತಾರೆ. ನನಗೆ ಪೊಲೀಸರು ಮಹಜರ್ ದಾರನಾಗಿ ಬರಲು ನೋಟೀಸನ್ನು ಜಾರಿ ಮಾಡಿರುವುದಿಲ್ಲ. ನನ್ನ ಸಮಕ್ಷಮ ಈ ಪ್ರಕರಣದಲ್ಲಿ ಯಾವುದೇ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದಿರುವ ಗೊತ್ತಿಲ್ಲದಿದ್ದರೂ ಸಹ ನಾನು ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರು ತುಂಬಾ ವಿಶ್ವಾಸದಿಂದ ಇರುವ ಕಾರಣ

ಆತನ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸಾಕ್ಷಿಯು ನಾನು ಮತ್ತು ಚಾಸಾ-*1* ರವರು ವಿಶ್ವಾಸದಿಂದ ಇಲ್ಲ ಎಂದು ನುಡಿಯುತ್ತಾರೆ. ನಿಪಿ-*2* ರ ಮಹಜರ್ ಕ್ರಮವನ್ನು ಯೋಗಿಶ್ ರವರು ಬರೆದಿರುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**